KA / BG - GPO/ 2515 /WPP-47/ 2009 - 2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ – IV-A | ಬೆಂಗಳೂರು, ಸೋಮವಾರ, ಅಕ್ಟೋಬರ್ ೨೪, ೨೦೧೧ (ಕಾರ್ತೀಕ ೨, ಶಕ ವರ್ಷ ೧೯೩೩) | ನಂ. ೮೯೦ |
|---|---|---|

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ : ಸಿಆಸುಇ :191:ಆರ್‌ಟಿಐ:2010, ಬೆಂಗಳೂರು, ದಿನಾಂಕ : 22.10.2011**

ಮಾಹಿತಿ ಹಕ್ಕು ಅಧಿನಿಯಮ, 2005ರ (2005ರ ಕೇಂದ್ರ ಅಧಿನಿಯಮ ಸಂ:22) 15ನೇ ಪ್ರಕರಣದ (4)ನೇ ಉಪ–ಪ್ರಕರಣದೊಂದಿಗೆ ಓದಲಾಗುವ 27ನೇ ಪ್ರಕರಣದ (1) ಮತ್ತು (2)ನೇ ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ, ಕರ್ನಾಟಕ ಮಾಹಿತಿ ಹಕ್ಕು ನಿಯಮಗಳು, 2005ನ್ನು ಮತ್ತಷ್ಟು ತಿದ್ದುಪಡಿ ಮಾಡುವ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ ಎಂದರೆ:–

### ನಿಯಮಗಳು

**1. ಹೆಸರು ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ಮಾಹಿತಿ ಹಕ್ಕು (ತಿದ್ದುಪಡಿ) ನಿಯಮಗಳು, 2011 ಎಂದು ಕರೆಯತಕ್ಕದ್ದು.

(2) ಅವು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 7ರ ತಿದ್ದುಪಡಿ:–** ಕರ್ನಾಟಕ ಮಾಹಿತಿ ಹಕ್ಕು ನಿಯಮಗಳು, 2005ರ (ಇಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) 7ನೇ ನಿಯಮದಲ್ಲಿ (1)ನೇ ಉಪ ನಿಯಮದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

2. ಅರ್ಜಿದಾರನು ಮಾಹಿತಿ ಹಕ್ಕು ಅಧಿನಿಯಮ 2005ರ 19(1)ನೇ ಪ್ರಕರಣದ ಮೇರೆಗೆ ಸಾರ್ವಜನಿಕ ಮಾಹಿತಿ ಅಧಿಕಾರಿಗಿಂತ ಹಿರಿಯ ದರ್ಜೆಯ ಅಧಿಕಾರಿಗೆ ಅಪೀಲು ಸಲ್ಲಿಸದ ಹೊರತು, 19(3)ನೇ ಪ್ರಕರಣದ ಮೇರೆಗೆ ಕರ್ನಾಟಕ ರಾಜ್ಯ ಮಾಹಿತಿ ಆಯೋಗಕ್ಕೆ ಮೇಲ್ಮನವಿ ಸಲ್ಲಿಸತಕ್ಕದ್ದಲ್ಲ.

**3. 12ಎ ಹೊಸನಿಯಮದ ಸೇರ್ಪಡೆ :–** ಸದರಿ ನಿಯಮಗಳ 12ನೇ ನಿಯಮದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**12ಎ. ಮುಖ್ಯ ಮಾಹಿತಿ ಆಯುಕ್ತರ ಹುದ್ದೆಯು ಖಾಲಿ ಇದ್ದಾಗ ಕರ್ತವ್ಯಗಳ ನಿರ್ವಹಣೆ :–**ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಹುದ್ದೆಯು ಖಾಲಿ ಇದ್ದಾಗ ಅಥವಾ ಗೈರುಹಾಜರಿಯ ಕಾರಣದಿಂದ, ಅನಾರೋಗ್ಯದ ನಿಮಿತ್ತ

ಅಥವಾ ಯಾವುದೇ ಇತರ ಕಾರಣದಿಂದ ಈ ಅಧಿಕಾರಿಯು ತನ್ನ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗದಿದ್ದಾಗ, ಅವರ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ಕಚೇರಿಯಲ್ಲಿರುವ ಅತ್ಯಂತ ಹಿರಿಯ ಆಯುಕ್ತರು ನಿರ್ವಹಿಸತಕ್ಕದ್ದು".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಲ.ವೆಂಕಟಗಿರಿಯಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತುಆಡಳಿತ ಸುಧಾರಣಾ ಇಲಾಖೆ
(ಜನಸ್ಪಂದನ ಕೋಶ- ಮಾಹಿತಿ ಹಕ್ಕು)

**PERSONNEL AND ADMINISTRATIVE REFORMS SECRETARIAT**

**NOTIFICATION**

**No. DPAR:191: RTI:2010, Bangalore, dated: 22.10.2011**

In exercise of the powers conferred by clause(1) and (2) of section 27 read with sub-section (4) of section 15 of the Right to Information Act, 2005 (Central Act No.22 of 2005), the Government of Karnataka hereby makes the following rules further to amend the Karnataka Right to Information Rules, 2005 namely:-

**RULES**

**1. Title and commencement:-** (1) These rules may be called the Karnataka Right to Information (Amendment) Rules, 2011.

(2) They shall come into force from the date of their publication in the official Gazette.

**2. Amendment of rule 7:-** In rule 7 of the Karnataka Right to Information Rules, 2005 (hereinafter referred to as the said rules), after sub-rule(1), the following shall be inserted, namely:-

"(2) No appeal shall lie before the Karnataka State Information Commissioner under section 19(3), unless the applicant has resorted his remedy before the immediate appellate authority, who is above the public Information Officer under section 19(1)of the Act."

**3. Insertion of new rule 12A:-** After rule 12 of the said rules, the following shall be inserted, namely:-

"**12A. Discharge of duties when the post of the Chief Information Commissioner falls vacant:-** When the Office of the State Chief Information Commissioner falls vacant or the Officer is unable to discharge his duties and functions, owing to absence, due to illness or any other cause, his duties and functions shall be performed by the senior-most Commissioner in the Office."

By Order and in the name of the Governor of Karnataka,

**L.Venkatagiriyappa**
Under Secretary to Government,
Department of Personnel and Administrative Reforms
(Janaspandana Cell- RTI)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಹಿ3) (500 ಪ್ರತಿಗಳು)